ಶ್ರೀ ಕೆ. ಎಸ್. ಗೌಡಯ್ಯ.—ಪ್ರಾಜೆಕ್ಟ್ ರಿಪೋರ್ಟ್, ಚೆಕ್ಕಿಕರ್ ಕ್ಲಿಯರೆನ್ಸ್ ಕಳುಹಿಸಿ ಕೊಡುತ್ತೀರಿ ಅಲ್ಲವೆ ?

ಶ್ರೀ ಎಸ್. ನಿಜಲಿಂಗಪ್ಪ.—ಪ್ರಾಜೆಕ್ಟು ರಿಪೋರ್ಟ್ ಆದಮೇಲೆ ಕಳುಹಿಸಿ ಕೊಡುತ್ತಾರೆ. ಅದು ಬರಬೇಕಲ್ಲಾ ?

ಶ್ರೀ ಟಿ. ಎನ್. ಮಾದಪ್ಪ ಗೌಡ.—2845 ಅಡಿ ಎತ್ತರದಲ್ಲಿ ಅರ್. ಎಲ್. ಮಟ್ಟ ಇದೆ. ನಾಗಮಂಗಲ ತಾಲ್ಲೂಕು ಬಾಕಿ ತಾಲ್ಲೂಕುಗಳ ಮಟ್ಟಕ್ಕಿಂತ ಕಡಿಮೆ ಲೆವೆಲ್ಲಿನಲ್ಲಿ ಇರುವುದರಿಂದ, ಆ ಪ್ರದೇಶಕ್ಕೆ ನೀರು ತಂದುಕೊಡುವುದಕ್ಕೆ ಏನು ಕಷ್ಟ ?

ಶ್ರೀ ಎಸ್. ನಿಜಲಿಂಗಪ್ಪ.—ಕಷ್ಟ ಇರುವುದು ನೀರು ಪೂರೈಕೆಯಿಲ್ಲ. ನೀರು ಹೆಚ್ಚಾಗಿದ್ದರೆ, ಕೊಡಬಹುದು. ನೀರು ಹೆಚ್ಚಾಗಿ ಬಂದರೆ ಕೊಡುತ್ತೇವೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸ್ವಾಮಿ, ತಾವು 10 ಕೋಟಿ ರೂಪಾಯಿ ಅಥವಾ ಅದಕ್ಕಿಂತ ಹೆಚ್ಚಿಗೆ ಖರ್ಚು ತಗಲುತಕ್ಕ ಎಲ್ಲ ಯೋಜನೆಗಳನ್ನೂ ಕೇಂದ್ರಸರ್ಕಾರದವರೇ ವಹಿಸಿಕೊಳ್ಳಬೇಕೆಂದು ಈ ನಭೆಯಲ್ಲಿಯೂ, ಹೊರಗಡೆಯೂ ಅನೇಕ ಸಾರಿ ಹೇಳಿದ್ದೀರಿ. ಕೇಂದ್ರಸರ್ಕಾರವನ್ನು ಒಪ್ಪಿಸುವುದರಲ್ಲಿ ಎಷ್ಟರಮಟ್ಟಿಗೆ ತಾವು ಜಯಪ್ರದ ಆಗಿದ್ದೀರಿ ?

ಶ್ರೀ ಎಸ್. ನಿಜಲಿಂಗಪ್ಪ.—ಅವರು ಇನ್ನೂ ಒಪ್ಪಬೇಕಾಗಿದೆ.

Acquisition Proceedings for the Construction of Gadag–Koppal Road.

*Q.—259. **Sri C. S. HULKOTI** (Mundargi).—

Will the Government be pleased to state :—

(*a*) whether they are aware that the final notification regarding the land acquisition proceedings started for the construction of Gadag-Koppal Road in the Gadag and Mundargi Taluks in the district of Dharwar has not been completed and the award has not been passed as yet and the remaining compensation amount has not been paid to the land-holders ;

(*b*) at what stage the proceedings are pending at present;

(*c*) why the proceedings are delayed ;

(*d*) whether they are aware that the landholders have parted with the lands since a long period and are complaining about the non-payment of the remaining amount of compensation;

(*e*) what steps the Government have taken to expedite in finalising of the proceedings ?

*A.—**Sri M. V. KRISHNAPPA** (Minister for Revenue).—

(*a*) Yes.

(*b*) Enquiries are being made before finalising the award.

(*c*) The area of land to be acquired is very large and the proceedings are to be taken in accordance with the procedure prescribed under the Land Acquisition Act.

(*d*) Yes.

(*e*) Efforts are being made to finalise the Land Acquisition proceedings and the payment of compensation as expeditiously as possible.

Sri C. S. HULKOTI.—In what office the enquiries are pending ?

Sri M. V. KRISHNAPPA.—The enquiries are pending with the Assistant Commissioner; the final decision will be taken by the Deputy Commissioner.

Sri C. S. HULKOTI.—Is the Government aware that revenue is being collected from such lands?

Sri M. V. KRISHNAPPA.—It is wrong on the part of the Revenue Department to collect revenue from such lands. We will see that they do not do it hereafter.

ಶ್ರೀ ಸಿ. ಎಸ್. ಹುಲ್ಕೋಟಿ.—ಅಕ್ವಿಸಿಷನ್ ಕಾಂಪೇನ್ಸೇಷನ್ ಕೊಡುವತನಕ ಕ್ರಾಪ್ ಕಾಂಪೆನ್ಸೇಶನ್ ಕೊಡುವುದನ್ನು ಬಂದ್ ಮಾಡಿರುವುದಕ್ಕೆ ಕಾರಣವೇನು?

ಶ್ರೀ ಎಂ. ವಿ. ಕೃಷ್ಣಪ್ಪ.—ಬಂದ್ ಮಾಡಿಲ್ಲ. ಕ್ರಾಪ್ ಕಾಂಪೆನ್ಸೇಷನ್ ಕೊಡಬೇಕೆಂದು ನಾವು ಎರಡು ವರ್ಷದಲ್ಲಿ ಏನು ರೂಲ್ಸ್ ಮಾಡಿದ್ದೆವೊ, ಅದು ಹಾಗೆಯೆ ಇದೆ, ಆ ಆಜ್ಞೆಯನ್ನು ವಾಪಸು ಪಡೆದಿಲ್ಲ. ಈ ಕೇಸಿನಲ್ಲಿ ಅಡ್‌ವಾನ್ಸ್ ಕಾಂಪೆನ್‌ಸೇಷನ್ 75 ಕೊಟ್ಟಿದೆ.

Soil Testing work by the Agricultural Department.

*Q.—172. Smt. B. L. SUBBAMMA (Chickmagalur).—

Will the Government be pleased to state:—

(a) the names of districts in Mysore State where the Agricultural Department has done Soil Testing;

(b) whether the required staff is appointed for this purpose;

(c) in which district the work of soil testing is going on at present?

A.—Sri H. C. BORAIAH (Parliamentary Secretary to Minister for Agriculture).—

(a) The Department has been doing soil testing work in respect of all the nineteen districts of the State.

(b) Yes.

(c) Soil testing work in respect of all the districts is going on at present.

9.30. A. M.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಉತ್ತರದಲ್ಲಿ ಎಲ್ಲ 19 ಜಿಲ್ಲೆಗಳಲ್ಲಿಯೂ ಮಣ್ಣಿನ ಪರೀಕ್ಷೆ ಮಾಡುತ್ತಿದ್ದಾರೆಂದು ಹೇಳಿದ್ದಾರೆ. ಆದರೆ ದೇಶದ ಯಾವ ಯಾವ ಭಾಗದಲ್ಲಿ ಇಂತಹ ಪ್ರಯೋಗ ಕೇಂದ್ರಗಳನ್ನು ತೆರೆಯಲಾಗಿದೆ?

ಶ್ರೀ ಹೆಚ್. ಸಿ. ಬೋರಯ್ಯ (ವ್ಯವಸಾಯ ಶಾಖೆಯ ಸಂಸತ್ತಿನ ಕಾರ್ಯದರ್ಶಿ).—ಹೆಬ್ಬಾಳ್‌ನಲ್ಲಿ ಸರಕಾರದವರ ಒಂದು ಮಾದರಿ ಪ್ರಯೋಗ ಕೇಂದ್ರ ಇದೆ. ಇದೂ ಅಲ್ಲದೆ ಮೈಸೂರಿನಲ್ಲಿರುವ ವಾಣಿವಿಲಾಸ ಮೊಹಲ್ಲಾದಲ್ಲಿರುವ ಕಾಫೀ ಕ್ಯೂರಿಂಗ್ ವರ್ಕ್ಸ್‌ನವರು ಒಂದು ಪ್ರಯೋಗ ಕೇಂದ್ರವನ್ನು ನಡೆಸುತ್ತಿದ್ದಾರೆ. ಇನ್ನೊಂದು ಖಾಸಗಿಯಾಗಿ ಮಣಿಪಾಲ್‌ನಲ್ಲಿ ಕಸ್ತೂರಿ ಬಾ ಕೇಂದ್ರಕ್ಕೆ ಸೇರಿದಂತೆ ನಡೆಸುತ್ತಿದ್ದಾರೆ.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಈ ಪ್ರಯೋಗ ಕೇಂದ್ರಗಳಿಗೆ ಬರುವ ಮಣ್ಣಿನ ಪರೀಕ್ಷೆ ಮಾಡಿ ಎಷ್ಟೆಷ್ಟು ಬೆಳೆ ಹೆಚ್ಚು ಮಾಡಬಹುದು ಎನ್ನುವುದಕ್ಕೆ ವ್ಯವಸಾಯ ಇಲಾಖೆಯವರು ರೈತರಿಗೆ ತಿಳಿಯುವಂತೆ ಏನಾದರೂ ಪ್ರಚಾರ ಕಾರ್ಯ ಮಾಡುತ್ತಿದ್ದಾರೆಯೇ?